# ಸುಖದ ಸುಪ್ಪತ್ತಿಗೆಯಲ್ಲಿ...

ಉಕ್ಕಿಹರಿದ ನದೀ ಪ್ರವಾಹದಿಂದ ಕಂಗಾಲಾಗಿರುವ ಗುಜರಾತ್‌ನ ಹಲವು ಹಳ್ಳಿಗಳಲ್ಲಿ ಜನಜೀವನ ಪೂರ್ಣ ಅಸ್ತವ್ಯಸ್ತಗೊಂಡಿದೆ. ಜನ–ಜಾನುವಾರುಗಳ ಸಂಕಷ್ಟ ಹೇಳತೀರದು. ಆದರೆ ದೇಶದ ಬಹುತೇಕ ಮಾಧ್ಯಮಗಳಲ್ಲಿ ಗುಜರಾತ್ ಶಾಸಕರ ಪೆರೇಡ್, ಪಕ್ಷಾಂತರ, ಉಚ್ಚಾಟನೆ, ಚುನಾವಣೆಗಳದ್ದೇ ಸುದ್ದಿ! ಇದೆಲ್ಲದರ ಮಧ್ಯೆ ಕಳೆದ ವಾರ ಗಮನ ಸೆಳೆದ ಸಣ್ಣ ಸುದ್ದಿಯೆಂದರೆ, ರಿಲಯನ್ಸ್ ಫೌಂಡೇಷನ್‌ನ ಸ್ಥಾಪಕಿ, ಚೇರ್‌ಮನ್ ನೀತಾ ಅಂಬಾನಿ ಅವರು ಸಂಪೂರ್ಣ ನಾಶವಾಗಿರುವ ನಾಲ್ಕು ಹಳ್ಳಿಗಳನ್ನು ದತ್ತು ತೆಗೆದುಕೊಂಡದ್ದು. ಪ್ರವಾಹದಿಂದ ಬಸವಳಿದಿರುವ ಹಳ್ಳಿಗರ ನಡುವೆ ಓಡಾಡಿ ಆದ ಪ್ರವಾಹ ನಷ್ಟವನ್ನು ಕಣ್ಣಾರೆ ಕಂಡ ನೀತಾ ಅಂಬಾನಿ, ಜನರ ಜತೆಗೇ ನೆಲದಲ್ಲಿ ಕುಳಿತು ಸುಖ– ದುಃಖ ವಿಚಾರಿಸಿದರು, ಸಾಂತ್ವನ ಹೇಳಿದರು. 'ಚಿಂತಿಸಬೇಡಿ, ಪೂರ್ಣ ನಾಶಗೊಂಡಿರುವ ನಾಲ್ಕು ಹಳ್ಳಿಗಳನ್ನು ನಮ್ಮ ಫೌಂಡೇಷಮ್ ದತ್ತು ತೆಗೆದುಕೊಳ್ಳಲಿದೆ. ಎಲ್ಲರಿಗೂ ಮನೆ, ಆಸ್ಪತ್ರೆ, ಶಾಲೆ, ಸಮುದಾಯ ಭವನಗಳನ್ನು ನಿರ್ಮಿಸಿಕೊಡುತ್ತೇವೆ' ಎಂದು ಭರವಸೆ ನೀಡಿದರು. ಶಾಸಕರು, ಸಂಸದರೆಲ್ಲ ಅಧಿಕಾರಗ್ರಹಣದ ಜಟಾಪಟಿಯಲ್ಲಿ ಇನ್ನೂ ತಲ್ಲೀನರಾಗಿರುವ ಸಂದರ್ಭದಲ್ಲಿ ಹೀಗೆ ಜನಸಾಮಾನ್ಯರ ಕಣ್ಣೀರು ಒರೆಸುವ ಮೂಲಕ ನೀತಾ ಅಂಬಾನಿ ಸುದ್ದಿಯಲ್ಲಿದ್ದಾರೆ.

ಸುದ್ದಿಯಲ್ಲಿರುವುದು ನೀತಾ ಅವರಿಗೆ ಹೊಸತೇನೂ ಅಲ್ಲ. 3 ಲಕ್ಷ ರೂಪಾಯಿಯ ಕಪ್ ಸಾಸರ್‌ನಲ್ಲಿ ಕಾಫಿ ಕುಡಿಯುತ್ತಾರೆ; ದಿನಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ, 10 ಲಕ್ಷ ರೂಪಾಯಿ ಮೌಲ್ಯದ ಚಪ್ಪಲಿ ಧರಿಸುತ್ತಾರೆ, ಒಮ್ಮೆ ಧರಿಸಿದ ಚಪ್ಪಲಿಯನ್ನು ಇನ್ನೊಮ್ಮೆ ಧರಿಸುವುದೇ ಇಲ್ಲ– ಹೀಗೆ ಅಂತರ್ಜಾಲದಲ್ಲಿ ನೀತಾ ಅಂಬಾನಿಯವರ ಕುರಿತು ನೂರೆಂಟು ಸುದ್ದಿಕಥೆಗಳು ಹರಿದಾಡುತ್ತಿವೆ. ಕಳೆದ ವಾರವಂತೂ 'ನೀತಾ ಅವರು ಫಾಲ್ಕನ್ ಸೂಪರ್‌ನೋವಾ ಐಫೋನ್ 6 ಪಿಂಕ್ ಡೈಮಂಡ್ ಮೊಬೈಲ್ ಬಳಸುತ್ತಾರೆ. ಈ ಮೊಬೈಲ್‌ನ ಬೆಲೆ 48.5 ದಶಲಕ್ಷ ಡಾಲರ್ ಅಂದರೆ, ಅಂದಾಜು 315 ಕೋಟಿ ರೂಪಾಯಿ' ಎಂಬ ಸುದ್ದಿ ಹಬ್ಬಿತ್ತು. ಅವರ ಸೆಕ್ರೆಟರಿ 'ಅಂತಹ ಯಾವ ಫೋನನ್ನೂ ನೀತಾ ಮೇಡಂ ಬಳಸುತ್ತಿಲ್ಲ' ಎಂದು ಸಮಜಾಯಿಷಿ ಕೊಡಬೇಕಾಯಿತು.



ಹಾಗೆ ನೋಡಿದರೆ, ಇಷ್ಟೊಂದು ವೈಭವೋಪೇತವಾಗಿ ಬದುಕುವ ಎಲ್ಲ ಅವಕಾಶಗಳೂ ನೀತಾ ಅವರಿಗೆ ಇವೆ. ಏಕೆಂದರೆ ಅವರು ಭಾರತದ 'ನಂಬರ್ ಒನ್ ಶ್ರೀಮಂತ', 22.6 ಶತಕೋಟಿ ಡಾಲರ್ ಸಂಪತ್ತಿನ ಒಡೆಯ ಮುಖೇಶ್ ಅಂಬಾನಿಯವರ ಪತ್ನಿ. ಮಧ್ಯಮವರ್ಗದ ಸಾಂಪ್ರದಾಯಕ ಕುಟುಂಬದಲ್ಲಿ ಹುಟ್ಟಿ ಬೆಳೆದ ನೀತಾ, ಧೀರೂಭಾಯಿ ಅಂಬಾನಿಯವರ ಸೊಸೆಯಾದ ಬಳಿಕ ಭಾರತದ ಅತಿದೊಡ್ಡ ಶ್ರೀಮಂತ ಮಹಿಳೆಯಾಗಿರುವುದು ಸುಳ್ಳಲ್ಲ. ಆದರೆ ಸೆಲೆಬ್ರಿಟಿಗಳ ಬಗ್ಗೆ, ಅವರ ಜೀವನಶೈಲಿಯ ಬಗ್ಗೆ ಅದಕ್ಕೆ ತಕ್ಕಂತೆ ದಂತ 'ಕಥೆ'ಗಳು ಹುಟ್ಟುವುದೂ ಅಷ್ಟೇ ನಿಜ. ಜಗತ್ತಿನ ಅತ್ಯುತ್ತಮ ಬ್ರ್ಯಾಂಡ್‌ಗಳ ಚಪ್ಪಲಿ, ಬ್ಯಾಗ್ ಮತ್ತಿತರ ವಸ್ತುಗಳನ್ನು ನೀತಾ ಬಳಸುತ್ತಿರುವುದು ಸತ್ಯ. ಆದರೆ ಒಮ್ಮೆ ಧರಿಸಿದ ಚಪ್ಪಲಿಯನ್ನು ಇನ್ನೊಮ್ಮೆ ಧರಿಸುವುದಿಲ್ಲ; ದಿನಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಎನ್ನುವುದೆಲ್ಲ ಸುಳ್ಳು.

ನೀತಾ ಶಾಸ್ತ್ರೀಯವಾಗಿ ಭರತನಾಟ್ಯ ಕಲಿತಾಕೆ. ಮುಂಬೈಯಲ್ಲಿ ಕಾಲೇಜು ಕಲಿಯುತ್ತಿರುವಾಗ ಈಕೆ ನಡೆಸಿಕೊಟ್ಟ ಭರತನಾಟ್ಯ ಕಾರ್ಯಕ್ರಮವನ್ನು ನೋಡಿದ ಧೀರೂಭಾಯಿ ಅಂಬಾನಿ ಖುದ್ದಾಗಿ ಈಕೆಗೆ ಫೋನ್ ಮಾಡಿದ್ದುಂಟು. ಆ ವೇಳೆಗೆ ಮಗ ಮುಖೇಶ್ ಜತೆಗೆ ಈಕೆ ಓಡಾಡುತ್ತಿದ್ದ ಸುದ್ದಿಯೂ ಧೀರೂಭಾಯಿಗೆ ಸಿಕ್ಕಿತ್ತು. ಆದರೆ ಈಕೆ, ಫೋನ್ ಮಾಡಿದವರು ಧೀರೂಭಾಯಿ ಎಂದು ನಂಬದೆ, 'ಹೌದಾ, ನಾನು ಎಲಿಜಬೆತ್ ಟೇಲರ್' ಎಂದು ಉತ್ತರಿಸಿ ಫೋನ್ ಕುಕ್ಕಿದ್ದು ಹಳೆಯ ಕಥೆ! ಮುಂಬೈಯಲ್ಲಿ 100 ಕೋಟಿ ಡಾಲರ್ ಮೌಲ್ಯದ 27 ಮಹಡಿಗಳ ಮನೆಯಲ್ಲಿ ವಾಸಿಸುತ್ತಿರುವ ನೀತಾಗೆ ಕಾನೂನು ಪದವಿಯ ಅಧ್ಯಯನವನ್ನು ಅರ್ಧಕ್ಕೆ ಬಿಟ್ಟ ಬಗ್ಗೆ ಈಗಲೂ ವಿಷಾದವಿದೆಯಂತೆ.

ಮದುವೆಯಾಗಿ 17 ವರ್ಷಗಳ ಕಾಲ ಹೊರಗೆ ಹೆಚ್ಚು ಕಾಣಿಸಿಕೊಳ್ಳದೆ ತನ್ನ ಪಾಡಿಗೆ ತಾನಿದ್ದ ನೀತಾ ಅಂಬಾನಿ, ಈಗ ರಿಲಯನ್ಸ್ ಫೌಂಡೇಷನ್ ಮೂಲಕ ಸಾಕಷ್ಟು ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ರಿಲಯನ್ಸ್ ಇಂಡಸ್ಟ್ರೀಸ್‌ನ ನಾನ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿರುವ ಅವರು, ಧೀರೂಭಾಯಿ ಇಂಟರ್‌ನ್ಯಾಷನಲ್ ಸ್ಕೂಲ್, ಆಸ್ಪತ್ರೆ ಮತ್ತು ಮುಂಬೈ ಇಂಡಿಯನ್ಸ್ ಐಪಿಎಲ್ ಕ್ರಿಕೆಟ್ ತಂಡದ ಮಾಲಕಿಯಾಗಿ ದಿನವಿಡೀ ಬ್ಯುಸಿ. ಇಂಟರ್‌ನ್ಯಾಷನಲ್ ಒಲಿಂಪಿಕ್ಸ್ ಅಸೋಸಿಯೇಶನ್ (ಐಒಸಿ) ಸದಸ್ಯೆ ಆಗಿರುವ ಭಾರತದ ಮೊತ್ತಮೊದಲ ಮಹಿಳೆಯೂ ಹೌದು. ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ನೀತಾ ಅವರಿಗೆ 4 ಲಕ್ಷ ರೂಪಾಯಿ ಸಿಟ್ಟಿಂಗ್ ಫೀ, 1.35 ಕೋಟಿ ರೂಪಾಯಿ ಲಾಭದ ಮೇಲಿನ ಕಮಿಷನ್ ಸಿಗುತ್ತಿದೆ. ತಮ್ಮ ಶಾಲೆಯಲ್ಲಿ ಈಗಲೂ ಅವರು ಪ್ರಾಥಮಿಕ ತರಗತಿಯ ಮಕ್ಕಳಿಗೆ ಪಾಠ ಮಾಡುವುದುಂಟು. ಅವರ ಬಳಿಯಲ್ಲಿ ರೇಂಜ್ ರೋವರ್, ರೋಲ್ಸ್‌ರಾಯ್ಸ್ ಫ್ಯಾಂಟಮ್, ಮರ್ಸಿಡಿಸ್ ಬೆಂಜ್ ಎಸ್ ಕ್ಲಾಸ್, ಮೇಬ್ಯಾಕ್ 62, ಬಿಎಂಡಬ್ಲ್ಯು 7601 ಮುಂತಾದ ಕಾರುಗಳಿವೆ. ಅದಕ್ಕಿಂತ ಹೆಚ್ಚಾಗಿ ಅವರ ಜೆಟ್ ಕಲೆಕ್ಷನ್‌ನಲ್ಲಿ ಬೋಯಿಂಗ್ ಬಿಸಿನೆಸ್ ಜೆಟ್2, ಫಾಲ್ಕನ್ 900 ಎಕ್ಸ್ ಮತ್ತು ಏರ್‌ಬಸ್ 319 ಕಾರ್ಪೊರೇಟ್ ಜೆಟ್‌ಗಳಿವೆ! ಇಷ್ಟೆಲ್ಲದರ ಮಧ್ಯೆಯೂ ಗುಜರಾತ್‌ನ ಪ್ರವಾಹದಲ್ಲಿ ಮುಳುಗಿದ ಹಳ್ಳಿಯೊಂದರಲ್ಲಿ ನೆಲದ ಮೇಲೆ ಕುಳಿತು ಹಳ್ಳಿಹೆಂಗಸರ ಕಷ್ಟ ಸುಖ ಕೇಳುತ್ತಾರೆಂದರೆ, ಅದರಲ್ಲೂ ಅವರು ಸುಖ ಕಂಡುಕೊಂಡಿರಬೇಕು ಎನ್ನುವುದು ನಿಸ್ಸಂಶಯ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65